# ‘ಇನ್ಸಿಡೆಂಟ್–26’ ಮುಕ್ತಾಯ



ಮಂಗಳೂರು: ಸುರತ್ಕಲ್‌ನಲ್ಲಿರುವ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕದಲ್ಲಿ (ಎನ್‌ಐಟಿಕೆ), ‘ಒಡೆಸ್ಸಿ: ಬಿಯಾಂಡ್ ದ ಎಡ್ಜ್’ ಘೋಷವಾಕ್ಯದೊಂದಿಗೆ 45ನೇ ವರ್ಷದ ‘ಇನ್ಸಿಡೆಂಟ್–26’ ಎಂಬ ಮೂರು ದಿನಗಳ ಉತ್ಸವ ಈಚೆಗೆ ನಡೆಯಿತು.

ಮುಖ್ಯ ಅತಿಥಿಯಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಎನ್‌ಐಟಿಕೆ ಹಳೆ ವಿದ್ಯಾರ್ಥಿ ದೀಪನ್ ಎಂ.ಎನ್. ಮಾತನಾಡಿ, ‘ಎನ್‌ಐಟಿಕೆ ಪಠ್ಯವನ್ನು ಮಾತ್ರ ಕಲಿಸುವುದಿಲ್ಲ, ಬದುಕನ್ನು ಹೇಗೆ ನಡೆಸಬೇಕು ಎಂಬುದನ್ನೂ ಕಲಿಸುತ್ತದೆ. ಇಲ್ಲಿ ಕಲಿತರೆ ಆತ್ಮವಿಶ್ವಾಸ ಹೆಚ್ಚುತ್ತದೆ’ ಎಂದರಲ್ಲದೆ, ತಾವು ತರಗತಿ ಮತ್ತು ವಿದ್ಯಾರ್ಥಿ ಮಂಡಳಿಯನ್ನು ಮುನ್ನಡೆಸಿದ ಅನುಭವಗಳನ್ನು ನೆನಪಿಸಿಕೊಂಡರು.

ಎನ್‌ಐಟಿಕೆ ಉಪನಿರ್ದೇಶಕ ಪ್ರೊ. ಸುಭಾಷ್ ಯಾರಗಲ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಗೋವಿಂದ ರಾಜ ಮಡೆಲಾ, ವಿದ್ಯಾರ್ಥಿ ಕಲ್ಯಾಣ ಡೀನ್, ಹಾಗೂ ಇತರ ಸಂಸ್ಥೆಯ ಅಧಿಕಾರಿಗಳು, ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಉತ್ಸವದಲ್ಲಿ ಸಂಗೀತ, ನೃತ್ಯ, ಸಾಹಿತ್ಯ, ಕ್ರೀಡೆ, ಫ್ಯಾಷನ್, ವ್ಯವಹಾರ, ಗೇಮಿಂಗ್, ನಾಟಕ ಸೇರಿದಂತೆ 50ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆದವು. ದೇಶದ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿದರು.

Prajavani, Date: 17/03/2026, p.03